

# ಸತ್ಯಕತೆಯ ದುರ್ಬಲ ಕಥನ

**ಸತ್ಯಘಟನೆಯನ್ನು ಆಧರಿಸಿದ 'ದಿ ಪ್ರೊಫೆಸರ್' ಕಿರುಚಿತ್ರ, ಕೈತುಂಬ ಸಂಬಳವಿರುವ ಪ್ರಾಧ್ಯಾಪಕ ವೃತ್ತಿಬಿಟ್ಟು, ಆದಿವಾಸಿ ಜನರ ಸೇವೆಗೆ ನಿಂತ ವ್ಯಕ್ತಿಯ ಪರಿಚಯವನ್ನು ಮಾಡಿಕೊಡುತ್ತದೆ.**

■ ಗೌರಿ

'ಇದು ಸತ್ಯಘಟನೆಯನ್ನು ಆಧರಿಸಿದ ಸಿನಿಮಾ' ಎಂಬ ಸೂಚನೆಯನ್ನು ಹಲವು ಸಲ ನಾವು ನೋಡುತ್ತಲೇ ಇರುತ್ತೇವೆ. ಸತ್ಯಘಟನೆ ಎನ್ನುವುದು ನಿಜಕ್ಕೂ ಸಿನಿಮಾಕಲೆಗೆ ಹೆಚ್ಚಿನದೇನನ್ನಾದರೂ ಸೇರಿಸುತ್ತದೆಯೇ? ಅಥವಾ ನಮ್ಮ ನೋಡುವ ಕ್ರಮವನ್ನು ಬದಲಿಸುತ್ತದೆಯೇ? ಸತ್ಯಘಟನೆಯನ್ನು ಆಧರಿಸಿದ ಸಿನಿಮಾಗಳನ್ನು ಮಾಡುವ ಕ್ರಮವೇ ಬೇರೆ ಇದೆಯೇ? ಈ ಎಲ್ಲ ಪ್ರಶ್ನೆಗಳೂ ಆ ಸಾಲಿನೊಂದಿಗೆ ಹೆಣೆದುಕೊಂಡಿವೆ.

ಸಾಮಾನ್ಯವಾಗಿ ಹೀಗೆ ಸತ್ಯಘಟನೆಯನ್ನು ಆಧರಿಸಿದ ಸಿನಿಮಾ ಮಾಡುವಾಗ ನಿರ್ದೇಶಕನಿಗೆ ಎದುರಾಗುವ ಬಹುದೊಡ್ಡ ಸವಾಲು, ಮೂಲದ ಸತ್ಯಘಟನೆಗೆ ನಿಷ್ಠನಾಗಿರಬೇಕೇ ಅಥವಾ ಸಿನಿಮಾ ಮಾಧ್ಯಮದ ಸಾಧ್ಯತೆಗಳಿಗೆ ಬದ್ಧನಾಗಿರಬೇಕೇ ಎಂಬುದು. ಈ ಎರಡರ ಹದ ಯಾವ ರೀತಿ ಸಾಧಿಸುತ್ತಾನೆ ಎಂಬುದೇ ಆ ಸಿನಿಮಾದ ಕಲಾತ್ಮಕ ಯಶಸ್ಸಿನ ಸೂತ್ರವಾಗುತ್ತದೆ.

'ದಿ ಪ್ರೊಫೆಸರ್' ಎಂಬ ಕಿರುಚಿತ್ರವೂ ಹೀಗೆ ವಾಸ್ತವದಲ್ಲಿ ಬದುಕಿರುವ ಒಬ್ಬ ವ್ಯಕ್ತಿಯ ಕುರಿತಾದುದು. ಟೆಕ್ಸಾಸ್ ಯೂನಿವರ್ಸಿಟಿಯಲ್ಲಿ ಪಿಎಚ್.ಡಿ. ಮುಗಿಸಿ, ದೆಹಲಿಯ ಐಐಟಿಯಲ್ಲಿ ಪ್ರಾಧ್ಯಾಪಕನಾಗಿ ಕೆಲಸಮಾಡುತ್ತಿದ್ದ ಅಲೋಕ್‌ಜಿ, ಸಮಾಜಸೇವೆ ಮಾಡಬೇಕು ಎಂಬ ಉದ್ದೇಶದಿಂದ ಮಧ್ಯಪ್ರದೇಶದಲ್ಲಿ, ಆದಿವಾಸಿಗಳು ನೆಲೆಸಿರುವ ಜಾಗಕ್ಕೆ ಬಂದು ನೆಲೆಗೊಳ್ಳುತ್ತಾರೆ. ಅಲ್ಲಿನ ಜನರ ಅಗತ್ಯವನ್ನು ಪೂರೈಸಲು ಹೋರಾಡುತ್ತ, ಸಾವಿರಾರು ಗಿಡಗಳನ್ನು ನೆಟ್ಟುಬೆಳೆಸುತ್ತ ಸರಳ ಜೀವನ ನಡೆಸುತ್ತಾರೆ.

**ಹೆಸರು:** ದಿ ಪ್ರೊಫೆಸರ್
**ನಿರ್ದೇಶನ:** ಇಮ್ರಾನಖ್ಬರ್ ಇಮಾನ್ದಾರ್
**ಛಾಯಾಗ್ರಹಣ:** ವಿನೋದ್ ಪಾಟೀಲ್
**ಸಂಕಲನ:** ಕಲ್ಪೇಶ್ ಮಿಸ್ತ್ರಿ
**ತಾರಾಗಣ:** ಜಯದೇವ ಪಾಂಡೆ, ಸಾಜಿತ್ ಆಚಾರ್ಯ, ಸಚಿತ್ ಕೆ. ಜರ್ಯಾಲ್

ಇಂಥ ವ್ಯಕ್ತಿಯ ಕುರಿತು ಹೇಳುವ ಈ ಕಿರುಚಿತ್ರದ ಉದ್ದೇಶ ಖಂಡಿತ ಒಳ್ಳೆಯದೆ. ಆದರೆ ಆ ಉದ್ದೇಶ ಕಲಾತ್ಮಕವಾಗಿಯೂ ಯಶಸ್ಸು ಗಳಿಸಿದೆಯೇ ಎಂದು ಕೇಳಿದರೆ ಇಲ್ಲವೆಂದೇ ಹೇಳಬೇಕಾಗುತ್ತದೆ.

ಅಲೋಕ್‌ಜಿ ಅವರನ್ನು ಸಂದರ್ಶನ ಮಾಡಲು ಮುಂಬೈನಿಂದ ಜಯದೇವ್ ಎಂಬ ಯುವ ಪತ್ರಕರ್ತ ಬರುತ್ತಾನೆ. ಮೊದಲಿಗೆ ಸಂದರ್ಶನ ಕೊಡಲು ನಿರಾಕರಿಸುವ ಅಲೋಕ್‌ಜಿ ನಂತರ ಅವನಿಗೆ ತನ್ನ ಕಥೆಯನ್ನು ಹೇಳುತ್ತಾರೆ. ನೈಜ ವ್ಯಕ್ತಿಯನ್ನು ಇಟ್ಟುಕೊಂಡು ಸಿನಿಮೀಯವೆನಿಸುವ ಕಿರುಚಿತ್ರ ಕಟ್ಟುವಲ್ಲಿ ನಿರ್ದೇಶಕರ ಹಿಡಿತ ತಪ್ಪಿರುವುದಕ್ಕೆ ಹಲವು ಪುರಾವೆಗಳು ಸಿಗುತ್ತವೆ.

ಚಿತ್ರ ಆರಂಭಗೊಳ್ಳುವುದೇ ನೀರಿಗಾಗಿ ಮೂರು ದಿನಗಳಿಂದ ನಳದ ಎದುರು ಕಾದುಕೂತ ಅಲೋಕ್‌ಜಿ ಮತ್ತು ಆದಿವಾಸಿಗಳ ಚಿತ್ರದ ಮೂಲಕ. ಕುಡಿಯಲೂ ನೀರಿಲ್ಲ ಎಂಬ ಮಾತುಗಳೂ ಅಲೋಕ್‌ಜಿ ಅವರ ಮಾತುಗಳಲ್ಲಿಯೇ ಕೇಳುತ್ತೇವೆ. ಆದರೆ ಅದೇ ದಿನ ರಾತ್ರಿ ಅಲೋಕ್‌ಜಿ ಸಹಾಯಕ, ಮರದ ಕೆಳಗೆ ನಡುಗುತ್ತ ಕೂತಿದ್ದ ಯುವ ಪತ್ರಕರ್ತನ ಮೇಲೆ ಬಕೆಟ್ ನೀರು ಸುರಿಯುತ್ತಾನೆ! ನಾಟಕೀಯಗೊಳಿಸಲಿಕ್ಕಾಗಿಯೇ ತಂದ ಇಂಥ ದೃಶ್ಯಗಳನ್ನು ನಿರ್ದೇಶಕರ ಅಸೂಕ್ಷ್ಮ ಗ್ರಹಿಕೆಯ ಫಲ ಎನ್ನದೆ ಇನ್ನೇನು ಹೇಳುವುದು? ಇಡೀ ಚಿತ್ರದುದ್ದಕ್ಕೂ ಅಂಥ ಹಲವು ಹಳಿತಪ್ಪಿದ ಚಿತ್ರಗಳು ಕಾಣಿಸುತ್ತಲೇ ಹೋಗುತ್ತವೆ. ಮಹಾನಗರದ ಲಾಫಿಂಗ್ ಕ್ಲಬ್‌ಗಳ ಹಾಗೆ ಆದಿವಾಸಿ ಮಕ್ಕಳ ಬಳಿ ಗುಂಪಾಗಿ ನಿಂತು ಹ್ಹೊ ಹ್ಹೊ ಹ್ಹೋ ಎಂದು ಆಕಾಶಕ್ಕೆ ಕೈಯೆತ್ತಿ ನಗಿಸುವುದೂ ಅಂಥ ಇನ್ನೊಂದು ಅಸೂಕ್ಷ್ಮ ಗ್ರಹಿಕೆಯಷ್ಟೆ.

ಢಾಳೆನಿಸುವ ಮೇಕಪ್ ಕೂಡ ಅಲೋಕ್‌ಜಿ ಪಾತ್ರಧಾರಿಯನ್ನು ವಯಸ್ಸಾದವರಂತೆ ಬಿಂಬಿಸಿಲ್ಲ. ಅನಗತ್ಯವಾದ ಏರಿಯಲ್ ಶಾಟ್‌ಗಳು, ಚಂದಗೊಳಿಸುವ ಉದ್ದೇಶದಾಚೆ ಯಾವ ಕೊಡುಗೆಯನ್ನೂ ನೀಡುವುದಿಲ್ಲ. ಒಬ್ಬ ವ್ಯಕ್ತಿಯ ಬದುಕಿನ ಕಥೆ ಕಿರುಚಿತ್ರದ ವ್ಯಾಪ್ತಿಗಿಂತ ದೊಡ್ಡ ಕ್ಯಾನ್ವಾಸನ್ನು ಬೇಡುತ್ತದೆ ಎಂಬುದರ ಅರಿವಿಲ್ಲದೆ ರೂಪುಗೊಂಡ ಈ ಕಿರುಚಿತ್ರವನ್ನು ಉದ್ದೇಶವನ್ನು ಮೆಚ್ಚಿಕೊಂಡು ನೋಡಬೇಕಷ್ಟೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/3febKM8 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.